# ಕೂದಲ ಮೋಹ

ಸಹಜವಾಗಿ ಇರುವ ಯಾವುದನ್ನೇ ಬದಲಾಯಿಸಹೊರಟರೂ ಅದರ ಪರಿಣಾಮ ವಿಪರೀತವೇ ಆಗುತ್ತದೆ ಎಂಬುದನ್ನು ಹಲವು ಸಂದರ್ಭ, ಸನ್ನಿವೇಶಗಳಲ್ಲಿ ನಾವು ನೋಡುತ್ತಲೇ ಇರುತ್ತೇವೆ. ಇದು ಇಡೀ ಜಗತ್ತಿಗೂ ಅನ್ವಯ, ನಮ್ಮ ದೇಹಕ್ಕೂ ಅನ್ವಯ. ಆದರೆ ಸಹಜವಾದದ್ದನ್ನು ಅಸಹಜವಾಗಿ ಬದಲಾಯಿಸುವ ಮನುಷ್ಯನ ಲೋಭ ಎಂದೂ ತೀರುವಂಥದ್ದಲ್ಲ. ಎಷ್ಟೆಂದರೂ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ'ವಲ್ಲವೇ?

ದೇಹಪ್ರಕೃತಿಗೆ ಸಹಜವಾಗಿಯೇ ಉದುರಿರುವ ತಲೆಕೂದಲನ್ನು ಮತ್ತೆ ಹುಟ್ಟಿಸಿಕೊಳ್ಳುವ ಹಪಹಪಿಯಲ್ಲಿ ವಿಪರೀತ ದುರಂತವನ್ನು ತಂದುಕೊಳ್ಳುವುದು 'ಬ್ಯಾಡ್ ಹೇರ್' ಎಂಬ ಈ ಕಿರುಚಿತ್ರದ ವಸ್ತು. ಹಾಗೆ ನೋಡಿದರೆ ಈ ಕಥೆ ಹೇಳುವುದು ನಿರ್ದೇಶಕರ ಉದ್ದೇಶವೇ ಅಲ್ಲ. ಇದಲ್ಲ, ಯಾವ ಕಥೆಯನ್ನು ಹೇಳುವುದೂ ಈ ಮಾದರಿಯ ಕಿರುಚಿತ್ರಗಳ ಉದ್ದೇಶ ಆಗಿರುವುದಿಲ್ಲ. ಕಥೆ ಎಂಬುದು ಇಲ್ಲೊಂದು ನೆಪ ಅಷ್ಟೆ. ಹಾಗಾಗಿಯೇ ಎಲ್ಲರಿಗೂ ಗೊತ್ತಿರುವ ಒಂದು ಮೋಜಿನ ಕಥೆಯನ್ನೇ ಇಲ್ಲಿ ನಿರ್ದೇಶಕರು ಆರಿಸಿಕೊಂಡಿದ್ದಾರೆ.

ಬೋಳುತಲೆಯ ವ್ಯಕ್ತಿಯೊಬ್ಬ, ತಲೆಮೇಲೆ ಕೂದಲು ಹುಟ್ಟಿಸುವ ಔಷಧಿ ತೆಗೆದುಕೊಳ್ಳುವುದು. ನಂತರ ಆ ಔಷಧಿ ತಾಗಿದಲ್ಲೆಲ್ಲ ಕೂದಲು ಹುಟ್ಟಿ ವಿಕಾರಗೊಳ್ಳುವ ವಿನೋದದ ಕಥೆಯನ್ನು ನಾವೆಲ್ಲರೂ ಕೇಳಿರುತ್ತೇವೆ. ಅದೊಂದು ಹಾಸ್ಯಪ್ರಸಂಗವಾಗಿ ಕಂಡು ನಕ್ಕೂ ಇರುತ್ತೇವೆ. ಆದರೆ ಅದೇ ಕಥೆಯನ್ನು ಇಟ್ಟುಕೊಂಡು ಇಲ್ಲಿ ನಿರ್ದೇಶಕರು ಭಯಾನಕ ಅನುಭವವನ್ನು ಕೊಡಲು ಯತ್ನಿಸಿದ್ದಾರೆ.

ವಿಕಾರ, ವಿಕೃತಿಗಳೇ ತುಳುಕುವ ದೃಶ್ಯಗಳನ್ನು ತೋರಿಸಿ ಮೈ ರೇಜಿಗೆ ಹುಟ್ಟಿಸುವುದು ಮತ್ತು ಆ ರೇಜಿಗೆಯ ಕಾರಣಕ್ಕೆ ಮತ್ತೆ ಮತ್ತೆ ನೋಡುವಂತೆ ಮಾಡಿ, ವ್ಯಾಪಾರೀ ಯಶಸ್ಸು ಗಳಿಸುವುದು ಹಾಲಿವುಡ್‌ನ ಹಳೆಯ ಚಾಳಿ. ಮೈಯ ನರದೊಳಗಿನಿಂದ ಹುಳಗಳು ಹರಿದುಬರುವುದು, ಕಣ್ಣು ಕಿತ್ತುಹೋಗುವುದು, ಅಂಗಾಂಗ ವಿಕಾರಗೊಳ್ಳುವುದು ಹೀಗೆ ವಿಕೃತ ಕಲ್ಪನೆಗಳನ್ನೇ ಜೀವಾಳವಾಗಿಸಿಕೊಂಡಿರುವ ಸಾಲು ಸಾಲು ಸಿನಿಮಾಗಳು ಬಂದಿವೆ. 'ಬ್ಯಾಡ್ ಹೇರ್' ಕೂಡ ಅದೇ ಮಾದರಿಯನ್ನು ಅನುಸರಿಸುವ ಕಿರುಚಿತ್ರ. ಆದರೆ ಇಲ್ಲಿ ನಿರ್ದೇಶಕರು ಆರಿಸಿಕೊಂಡಿರುವ ನೆಪದ ಕಥೆ ತುಂಬ ಸರಳವಾದದ್ದು.

ತನ್ನ ಬೋಳುತಲೆಯ ಬಗ್ಗೆ ಜಿಗುಪ್ಸೆ ಇರುವ ವ್ಯಕ್ತಿಯೊಬ್ಬ ತಲೆಯ ಮೇಲೆ ಕೂದಲು ಮೊಳೆಯುವ ಔಷಧಿಯನ್ನು ತರಿಸಿಕೊಂಡಿದ್ದಾನೆ. ಏನಾಗುತ್ತದೆಯೋ ಎಂಬ ಆತಂಕವೂ ಅವನಿಗೆ ಇದೆ. ಆ ಆತಂಕದಲ್ಲಿಯೇ ತಲೆಯ ಮೇಲೆ ಅಳಿದುಳಿದಿದ್ದ ಕೂದಲುಗಳನ್ನು ಕತ್ತರಿಸಿಕೊಂಡು ಆ ಔಷಧಿಯನ್ನು ತಲೆಗೆ ಸವರಿಕೊಳ್ಳುತ್ತಾನೆ. ಆ ಔಷಧಿ ಮೆತ್ತಿಕೊಂಡಲ್ಲೆಲ್ಲ ತಲೆಮೇಲೆ ಬೊಕ್ಕೆಗಳು ಏಳುತ್ತವೆ. ಆ ಬೊಕ್ಕೆಗಳನ್ನು ಒಡೆದ ಹಾಗೆಲ್ಲ ನೋಡ ನೋಡುತ್ತಿರುವ ಹಾಗೆ ಉದ್ದುದ್ದ ಕೂದಲುಗಳು ಹುಟ್ಟುತ್ತವೆ. ತಲೆಯ ಮೇಲೆ ಕೃತಕವಾಗಿ ಬೆಳೆದ ಒರಟು ಕೂದಲನ್ನು ಕಂಡು ಅವನು ಸಂಭ್ರಮಪಡುತ್ತಾನೆ. ಆದರೆ ಆ ಸಂಭ್ರಮ ಹೆಚ್ಚು ಹೊತ್ತು ಇರುವುದಿಲ್ಲ. ತಲೆಮೇಲೆ ಹಚ್ಚಿದ್ದ ಕೂದಲಿನ ಸ್ವಲ್ಪ ಭಾಗ ಕಣ್ಣಿನಲ್ಲಿಯೂ ಬಿದ್ದಿರುತ್ತದೆ. ಕಣ್ಣಿನ ಒಳಗೂ ಕೂದಲು ಹುಟ್ಟಲಾರಂಭಿಸುತ್ತದೆ. ಹಾಗೆಯೇ ಇಡೀ ಮೈಗೆ ಕೂದಲು ಬೆಳೆದು ಕರಡಿಯ ಹಾಗಾಗುತ್ತಾನೆ.

ನೆನಪಿಸಿಕೊಂಡರೂ ರೇಜಿಗೆಯಲ್ಲಿ ಮೈ ಜುರುಗುಡುವ ಹಲವು ದೃಶ್ಯಗಳು ಈ ಚಿತ್ರದಲ್ಲಿವೆ. ಆ ದೃಶ್ಯಗಳೇ ಈ ಚಿತ್ರದ ಬಂಡವಾಳ. ಅದಕ್ಕೆ ತಕ್ಕ ವಿಎಫ್‌ಎಕ್ಸ್, ಹಾರರ್ ಸಿನಿಮಾಗೆ ಒಗ್ಗುವಂಥ ಛಾಯಾಗ್ರಹಣ, ಹಿನ್ನೆಲೆ ಸಂಗೀತ ಎಲ್ಲವೂ ಇಲ್ಲಿದೆ. ಸಿನಿಮಾ ಮಾಧ್ಯಮದ ತಾಂತ್ರಿಕ ಭಾಷೆ ಸಮರ್ಥವಾಗಿಯೇ ಬಳಕೆಯಾಗಿದೆ. ಆದರೆ ಆ ಭಾಷೆಯ ಮೂಲಕ ನಿರ್ದೇಶಕ ಕೊನೆಗೂ ಹೇಳಹೊರಟಿರುವುದು ಏನು ಎಂಬುದನ್ನು ಯೋಚಿಸಿದರೆ ಮೈ ಜುರುಗುಡುವ ಹೊರತಾದ ಇನ್ನೊಂದು ಆಯಾಮ ಈ ಚಿತ್ರಕ್ಕೆ ಇಲ್ಲವಷ್ಟೆ. ■

ಹೆಸರು: ಬ್ಯಾಡ್ ಹೇರ್
ನಿರ್ದೇಶನ: ಆಸ್ಕರ್ ಲೆಹೆಮಾ
ಛಾಯಾಗ್ರಹಣ: ಇವರ್ ಟೈಮ್
ಸಂಕಲನ: ಸ್ಯಾಂಡರ್ ಸೊಮ್ಮಾ
ತಾರಾಗಣ: ಸ್ಟೆನ್ ಕಾರ್ಪೋವ್




ಬೋಳುತಲೆಯ ಮೇಲೆ ಕೂದಲು ಬೆಳೆಸಿಕೊಳ್ಳಹೊರಟು ದುರಂತಕ್ಕೀಡಾಗುವುದು ಈ ಕಿರುಚಿತ್ರದ ವಸ್ತು. ಕಥೆ ಹೇಳುವುದಕ್ಕಿಂತ ದೃಶ್ಯಗಳ ಮೂಲಕ ಭಯಾನಕ ಅನುಭವ ಕೊಡುವುದೇ ನಿರ್ದೇಶಕರ ಉದ್ದೇಶವಿರುವಂತಿದೆ.

■ ಗೌರಿ

ಕಿರುಚಿತ್ರ ವೀಕ್ಷಣೆಗೆ bit.ly/3QMm2F0 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.